ಸೇತುವೆಯ ಅವಶ್ಯಕತೆ ಇದೆ ಎನ್ನುವುದನ್ನು ಸರ್ಕಾರ ಆಗಲೇ ಒಪ್ಪಿಕೊಂಡಿದೆ. ಅಧಿಕಾರಿಗಳ ಬಗ್ಗೆ ಹೇಳುವುದಕ್ಕೆ ಬಂದರೆ, ಅಧಿಕಾರಿಗಳ ವಿಷಯದಲ್ಲಿ ನನ್ನ ಬಳಿ ಬರಬೇಡಿ, ನಿಮ್ಮ ಕ್ಷೇತ್ರದ ವಿಷಯ ಇದ್ದರೆ ಮಾತ್ರ ಬನ್ನಿ ಎಂದು ತಾವು ಹೇಳುತ್ತೀರಿ. ಇದು ತಂದರೆ ಈ ರೀತಿ ಹೇಳುತ್ತಿರಿ. ತಮ್ಮ ಪುನರ್‌ಜನ್ಮದ ಅವಧಿಯಲ್ಲಿ ಇದನ್ನು ಮಾಡಿಸಿ, ತಮ್ಮ ಹೆಸರು ಇಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಲ್ಲಿ ಸೇತುವೆಯ ಅವಶ್ಯಕತೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದುವರೆಗೂ ಬ್ಯಾನ್ ಆರ್ಡರ್ ಇತ್ತು. ಆದ್ದರಿಂದ ತೆಗೆದು ಕೊಳ್ಳಲಿಕ್ಕೆ ಆಗಲಿಲ್ಲ. ಈ ಬಗ್ಗೆ ಅಂದಾಜು ತಯಾರು ಮಾಡಿಸಿ, ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಹನುಮೇಗೌಡ.—15 ದಿವಸದ ಹಿಂದೆ, ಸರ್ಕಾರದ ಹುಕುಂ ಅನ್ವಯ ಎಲ್ಲಾ ಎಕ್ಸಿಕ್ಯುಟೀವ್ ಇಂಜಿನಿಯರುಗಳಿಗೂ ಕಳುಹಿಸಿ, ರೋಡ್ ವರ್ಕ್ಸ್, ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟುವ ಕೆಲಸವನ್ನು ತಕ್ಷಣ ನಿಲ್ಲಿಸಬೇಕು ಎಂದು ತಿಳಿಸಿರುವುದು ನಿಜವೇ ! ಎಕಾನಮಿ ಮೆಜರ್ಸ್ ಹೋದ ಮೊದಲು ಈ ರೀತಿ ಆರ್ಡರ್ ಕಳುಹಿಸುವುದಕ್ಕೆ ಕಾರಣ ಏನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ರೀತಿ ಆರ್ಡರ್ ಕೊಟ್ಟಿಲ್ಲ, ಆರ್ಡರ್ ಕೊಟ್ಟಿರಿತಕ್ಕ ಉದ್ದೇಶ ಇಷ್ಟು, ಬ್ಯಾನ್ ಆರ್ಡರ್ ತೆಗೆದಿದ್ದೇವೆ, ಬಡ್ಜೆಟ್ಟಿನಲ್ಲಿರತಕ್ಕ ಕೆಲಸಗಳನ್ನು ಪ್ರಾರಂಭ ಮಾಡಬೇಕು ಮತ್ತು ಯಾವ ಯಾವುದು ಅವರ ಅಧಿಕಾರ ವ್ಯಾಪ್ತಿಗೆ ಒಳಗಿದೆ ಮತ್ತು ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದೆ, ಅದನ್ನು ಸರ್ಕಾರದ ಅನುಮತಿ ತೆಗೆದುಕೊಂಡು ಮಾಡಬೇಕು ಎಂದು ಹೇಳಿದೆ.

ಶ್ರೀ ಗಟ್ಟಿ ಚಂದ್ರಶೇಖರ್.—ತಮ್ಮ ಹೆಸರಿನಲ್ಲಿ ಕಲ್ಲು ತಯಾರಿಸಬೇಕಾಗಿದೆ ಎಷ್ಟು ದಿವಸದಲ್ಲಿ ಈ ಸೇತುವೆಯನ್ನು ಮಾಡಿಕೊಡುತ್ತೀರೆಂದು ಹೇಳಿದರೆ ನಮ್ಮ ಕ್ಷೇತ್ರದ ಜನಕ್ಕೆ ಒಂದು ಸಮಾಧಾನ ಹೇಳುವುದಕ್ಕೆ ಮಾರ್ಗವಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕೆಲಸದ ಪ್ರಮಾಣ ನೋಡಿಕೊಂಡು ಎಷ್ಟು ಕಡಿಮೆ ಕಾಲದಲ್ಲಿ ಮಾಡಬಹುದೋ ಅಷ್ಟು ಕಡಿಮೆ ಕಾಲದಲ್ಲಿ ಮಾಡಿಕೊಡುತ್ತೇನೆ.

Providing Electricity Facilities to the Villages in Shiralkoppa Division

672. **Sri K. YENKATAPPA** (Shikaripur).—

Will the Minister for Public Works and Electricity be pleased to state :—

(*a*) the number of villages wherein no electricity facilities are provided in Shiralkoppa Division ;

(*b*) when these villages will be provided with the said facility ;

(*c*) whether the Government have received representations from this Division ;

(*d*) when the programmes will be completed ;

(*e*) reasons for the delay in the matter so far ?

Sri H. M. CHANNABASAPPA (Minister for Public Works and Electricity).—

(*a*) 29 in Shiralkoppa Assembly Constituency.

(SRI H. M. CHANNABASAPPA)

(*b*) As and when provision of Electricity to these villages becomes economically and technically feasible.

(*c*) Yes.

(*d*) *Vide* reply to clause (*b*) above.

(*e*) Does not arise in view of replies to clauses (*b*) and (*d*).

ಶ್ರೀ ಕೆ. ಯಂಕಟಪ್ಪ.—ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಆರ್ಥಿಕ ಹಾಗೂ ತಾಂತ್ರಿಕ ದೃಷ್ಟಿಯಿಂದ ಸದರಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಸಾಧ್ಯವಾದಂತೆಲ್ಲ ಕ್ರಮ ಕೈಕೊಳ್ಳ ಲಾಗುವುದು ಎಂದು ಹೇಳಿದ್ದೀರಿ. ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕಾದರೆ ಎಂ. ಎಸ್. ಇ. ಬಿ. ಯಲ್ಲಿ ಕೆಲವು ನಿಬಂಧನೆಗಳಿವೆ. ಆ ನಿಬಂಧನೆಗಳಿಗೆ ಈ 29 ಹಳ್ಳಿಗಳು ಒಳಪಟ್ಟಿರುವುದರಿಂದ ಆದಷ್ಟು ಜಾಗ್ರತೆ ಈ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತೀರಾ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಿಬಂಧನೆಗಳಿಗೆ ಒಳಪಟ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಎನ್ನುವ ಉದ್ದೇಶದಿಂದಲೇ ಸಬ್-ಟ್ರಾನ್ಸ್‌ಮಿಷನ್ ಲೈನನ್ನು ಎಂ.ಎಸ್.ಇ.ಬಿ. ಖರ್ಚಿನಿಂದಲೇ ಮಾಡಬೇಕೆಂದು ಆಜ್ಞೆ ಮಾಡಿದೆಯೆಂಬ ವಿಷಯವನ್ನು ನಾನು ಅನೇಕ ಸಲ ಹೇಳಿದ್ದೇನೆ. ತಮ್ಮ ಏರಿಯಾದಲ್ಲಿ ಎರಡು ಸಬ್-ಟ್ರಾನ್ಸ್‌ಮಿಷನ್ ಲೈನ್ಸ್ ಹಾಕುವ ಬಗ್ಗೆ ಅಂದಾಜುಗಳು ತಯಾರಾಗಿ ಅವು ಪರಿಶೀಲನೆಯಲ್ಲಿವೆ. ಮೊದಲನೆಯದು ತೊಗರಡಿಯಿಂದ ಚಿತ್ತಕೊರಡಿಗೆ ಸಬ್-ಟ್ರಾನ್ಸ್‌ಮಿಷನ್ ಲೈನ್ ಹಾಕುವ ಬಗ್ಗೆ 1 ಲಕ್ಷ 20 ಸಾವಿರ ರೂಪಾಯಿಗಳ ಅಂದಾಜು ಮತ್ತು ತೊಲಗುಂದದಿಂದ ಅಗ್ರಹಾರಕ್ಕೆ ಒಂದು ಸಬ್-ಟ್ರಾನ್ಸ್‌ಮಿಷನ್ ಲೈನ್ ಹಾಕುವ ಬಗ್ಗೆ ಒಂದು ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ಅವುಗಳು ಪರಿಶೀಲನೆ ಯಲ್ಲಿವೆ. ಈ ಸಬ್-ಟ್ರಾನ್ಸ್‌ಮಿಷನ್ ಲೈನ್‌ಗಳನ್ನು ಹಾಕಿಯಾದ ಮೇಲೆ ಅಕ್ಕಪಕ್ಕದ ಇನ್ನೂ ಹೆಚ್ಚು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ. ಯಂಕಟಪ್ಪ.—ಆ ಕೆಲಸವನ್ನು ತ್ವರಿತವಾಗಿ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತ್ವರಿತವಾಗಿ ಮಾಡಬೇಕೆಂದೇ ಸಾರ್ವತ್ರಿಕವಾದಂಥ ಆಜ್ಞೆ ಮಾಡಿರುವುದು.

ಶ್ರೀ ಕೆ. ಯಂಕಟಪ್ಪ.—ಈ 29 ಹಳ್ಳಿಗಳಿಗೆ ಸಂಬಂಧಪಟ್ಟಂತೆ ಜಾಗ್ರತೆ ಮಾಡಿಸಿ ಕೊಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಶಿರಾಳಕೊಪ್ಪ ವಿಭಾಗಕ್ಕೆ ಹೆಚ್ಚಿನ ಪ್ರಾಶಸ್ತ್ಯವನು ಇತರ ಕಡೆಗಳಿಗಿಂತಲೂ ಕೊಡುವುದಕ್ಕೆ ಅಡ್ಡಿ ಬರುತ್ತದೆ. ಏಕೆಂದರೆ ಸ್ಟೇಟ್ ಆವರೇಜ್ 38 ಪರ್‌ಸೆಂಟ್ ಇದ್ದರೆ ತಮ್ಮ ಭಾಗದಲ್ಲಿ ಈಗಾಗಲೇ 45 ಪರ್‌ಸೆಂಟ್‌ವರೆಗೆ ವಿದ್ಯುಚ್ಛಕ್ತಿ ಕೊಡಲಾಗಿದೆ. ಆದ್ದರಿಂದ ಅವಶ್ಯಕತೆ ಇರತಕ್ಕಂಥ ಇನ್ನೂ ಅನೇಕ ಹಳ್ಳಿಗಳಿವೆ. ಅಂದರೆ ತಮ್ಮದನ್ನು ನಿರ್ಲಕ್ಷ ಬೇಕೆಂದು ಅಲ್ಲ, ಆದಷ್ಟು ಬೇಗ ತಮ್ಮ ಭಾಗಕ್ಕೂ ಮಾಡಿಸಿಕೊಡುತ್ತೇವೆ.

ಶ್ರೀ ಕೆ. ಯಂಕಟಪ್ಪ.—ನಮ್ಮ ತಾಲ್ಲೂಕ್‌ನಲ್ಲಿ ಸ್ಟೇಟ್ ಆವರೇಜ್‌ಗಿಂತ ಜಾಸ್ತಿ ವಿದ್ಯುಚ್ಛಕ್ತಿ ಕೊಟ್ಟಿರುವುದಾಗಿ ತಾವು ತಿಳಿಸಿದ ಮೇಲೆ ನಮ್ಮ ಭಾಗಕ್ಕೆ ಜಾಗ್ರತೆ ವಿದ್ಯುಚ್ಛಕ್ತಿ ಕೊಡುವುದಿಲ್ಲ ಎಂಬ ಸಂಶಯ ಬಂದಿದೆ. ಆ ಸಂಶಯ ನಿವಾರಣೆಗಾಗಿ ಈ ವರ್ಷದಲ್ಲಿಯೇ ಮಾಡಿಸಿ ಕೊಡುತ್ತೀರಾ ? ಏಕೆಂದರೆ ಕೆಲವು ಮನೆಗಳಲ್ಲಿ ಈಗಾಗಲೇ ವಿದ್ಯುಚ್ಛಕ್ತಿ ಬರುತ್ತದೆಂದು ವೈರಿಂಗ್ ಮಾಡಿಸಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸಬ್-ಟ್ರಾನ್ಸ್‌ಮಿಷನ್ ಲೈನ್ ಹಾಕಿದ ಮೇಲೆ ಯಾವ ಯಾವ ಗ್ರಾಮಗಳಿಗೆ ಆರ್ಥಿಕ ಹಾಗೂ ತಾಂತ್ರಿಕ ದೃಷ್ಟಿಯಿಂದ ವಿದ್ಯುಚ್ಛಕ್ತಿ ಕೊಡುವುದಕ್ಕೆ ಫೀಸಿಬಿಲಿಟಿ ಇರುತ್ತದೋ ಆ ಗ್ರಾಮಗಳಿಗೆಲ್ಲಾ ಮಾಡಿಸಿಕೊಡೋಣ.